ಅನುಬಂಧ: ಆಧಾರ (1)

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದೆ)
#36, ಎಂಎಸ್‌ಐಎಲ್ ಹೌಸ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052
ದೂರವಾಣಿ:080-22264021-25 ಫ್ಯಾಕ್ಸ್: 080-22734574
ಇ-ಮೇಲ್ msil.hrd@msilonline.com ವೆಬ್‌ಸೈಟ್: www.msilonline.com

## "ಆಮದು ಮಾಡಿದ ಎಂಎಸ್‌ಐಎಲ್ ಮರಳು" ಮಾರಾಟಕ್ಕಾಗಿ "ಬುಕ್ಕಿಂಗ್ ಏಜೆಂಟ್ಸ್"ನ ದಾಖಲಾತಿ (EOI)

EOI ಅಧಿಸೂಚನೆ ಸಂಖ್ಯೆ: ಎಂಎಸ್‌ಐಎಲ್/ಎಕ್ಸಿಂ/53/2017-18 ದಿನಾಂಕ 01-03-2018

ಎಂಎಸ್‌ಐಎಲ್ ಸಂಸ್ಥೆಯು ಕರ್ನಾಟಕ ಸರ್ಕಾರದ ಪ್ರಧಾನ ಮಾರ್ಕೆಟಿಂಗ್ ವಹಿವಾಟಿನ ಸಂಸ್ಥೆಯಾಗಿದ್ದು ರಾಜ್ಯಾದ್ಯಂತ ನೈಸರ್ಗಿಕ ನದಿ ಮರಳಿನ ಆಮದು ವ್ಯಾಪಾರಕ್ಕಾಗಿ ಅಗತ್ಯ ಮೂಲ ಸೌಕರ್ಯಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸ್ಟಾಕ್ ಯಾರ್ಡ್‌ಗಳನ್ನು ಸ್ಥಾಪಿಸಲಾಗುವುದು. ಸಂಸ್ಥೆಯು ಪೂರ್ಣ ಪ್ರಮಾಣದ ಸಿ&ಎಫ್ ಏಜೆಂಟ್/ಡೀಲರ್‌ಗಳೊಂದಿಗೆ ಕಾರ್ಯ ನಿರ್ವಹಿಸಲು ಸಂಪೂರ್ಣ ಪ್ರಮಾಣದ ಬುಕಿಂಗ್ ಏಜೆಂಟ್ ಜಾಲವನ್ನು ಅಭಿವೃದ್ಧಿ ಪಡಿಸಲು ಬಯಸುತ್ತಿದೆ. ಬುಕಿಂಗ್ ಏಜೆಂಟ್ ರವರು ನಿರ್ಮಾಣ ಸಾಮಗ್ರಿಗಳನ್ನು ಹೊಂದಿದ್ದು ನಿರ್ದಿಷ್ಟವಾಗಿ ಮರಳು ವ್ಯಾಪಾರ ಜ್ಞಾನದೊಂದಿಗೆ ವ್ಯವಹರಿಸುವ ಕ್ಷೇತ್ರದಲ್ಲಿ ಅನುಭವವನ್ನು ಹೊಂದಿರಬೇಕು. ಇವರು ಸ್ವತಂತ್ರವಾಗಿ ಮಾರಾಟ ಮತ್ತು ಪೂರೈಕೆ ಮಾಡುವಲ್ಲಿ ಸಿ&ಎಫ್ ಏಜೆಂಟ್/ಡೀಲರ್‌ರೊಂದಿಗೆ ನಿಕಟ ಸಹಕಾರ ಮತ್ತು ಎಂಎಸ್‌ಐಎಲ್ ದಾಸ್ತಾನುಗಾರರ ವ್ಯಾಪಾರ ಜಾಲವನ್ನು ಹೊಂದುವಂತಿರಬೇಕು. ಇಂತಹ ಸಂಪನ್ಮೂಲ ವ್ಯಕ್ತಿಗಳು/ ಸಂಸ್ಥೆಗಳು ಪೂರ್ವಾಪರ ದೃಢೀಕರಣದೊಂದಿಗೆ ನಿಗಧಿತ ನಮೂನೆಯಲ್ಲಿ ಎಂಎಸ್‌ಐಎಲ್ ಗೆ ಅನ್ವಯಿಸಲ್ಪಡುವ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಕಿರುಪಟ್ಟಿ ಮಾಡಿದ ವ್ಯಕ್ತಿ/ಏಜೆನ್ಸಿ ಸಂಸ್ಥೆಯಲ್ಲಿ EOI ಮಾಡಬಹುದು. ಆಸಕ್ತಿದಾಯಕ ವ್ಯಕ್ತಿಗಳು ಕಂಪನಿಯ ವೆಬ್‌ಸೈಟಿನಿಂದ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿ ಈ ಅಧಿಸೂಚನೆಯ ಪ್ರಕಟಣೆ ದಿನಾಂಕದಿಂದ 10 ದಿನಗಳೊಳಗೆ ಪ್ರಧಾನ ವ್ಯವಸ್ಥಾಪಕರು (ಆಮದು ಮತ್ತು ರಫ್ತು) ರವರ ಹೆಸರಿನಲ್ಲಿ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬಹುದಾಗಿರುತ್ತದೆ.

ಸಂಪರ್ಕ ಸಂಖ್ಯೆ: 080-22264026 ಇ-ಮೇಲ್ msil.hrd@msilonline.com
ವಿವರಗಳಿಗಾಗಿ ವೆಬ್‌ಸೈಟ್: www.msilonline.com ಭೇಟಿ ಕೊಡಿ

ಪ್ರಧಾನ ವ್ಯವಸ್ಥಾಪಕರು (ಅಮದು ಮತ್ತು ರಫ್ತು)

ಆಧಾರ (2)

EOI ಅಧಿಸೂಚನೆ ಸಂಖ್ಯೆ: ಎಂಎಸ್ಐಎಲ್/ಎಕ್ಸಿಂ/53/2017-18 ದಿನಾಂಕ 01-03-2018

**ಕಾರ್ಯಕ್ರಮಗಳ ವೇಳಾಪಟ್ಟಿ**

1. EOI ಪ್ರಕಟಣೆ ದಿನಾಂಕ : 01-03-2018

2. EOI ಪ್ರಾರಂಭ ದಿನಾಂಕ : 02-03-2018

3. EOI ದಾಖಲೆ ಸಲ್ಲಿಸುವ ಕೊನೆಯ ದಿನಾಂಕ : 12-03-2018 ಮಧ್ಯಾಹ್ನ (3-00 ಗಂಟೆ)

4. EOI ತೆರೆಯುವಿಕೆ : 13-03-2018 ಮಧ್ಯಾಹ್ನ (3-00 ಗಂಟೆ)

5. EOI ತೆರೆಯುವ ಸ್ಥಳ : ಪ್ರಧಾನ ವ್ಯವಸ್ಥಾಪಕರ ಕಛೇರಿ
(ಆಮದು ಮತ್ತು ರಫ್ತು)
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
#36, ಎಂಎಸ್ಐಎಲ್ ಹೌಸ್,
ಕನ್ನಿಂಗ್‌ಹ್ಯಾಂ ರಸ್ತೆ,
ಬೆಂಗಳೂರು-560 052

ಅರ್ಜಿ ಸಲ್ಲಿಸಲು ಮಾರ್ಗದರ್ಶನಗಳು:

1. ನಿಗದಿತ ಅರ್ಜಿ ನಮೂನೆಯನ್ನು ಎಂಎಸ್ಐಎಲ್ ವೆಬ್‌ಸೈಟ್ www.msilonline.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

2. ತುಂಬಿದ ಅರ್ಜಿ ನಮೂನೆ ಜೊತೆಯಲ್ಲಿ ಅಗತ್ಯ ದಾಖಲೆಗಳನ್ನು ಮೊಹರು ಮಾಡಿದ ಕವರ್‌ನಲ್ಲಿ ಸಲ್ಲಿಸಿ ಕವರ್‌ನ ಮೇಲ್ಭಾಗದಲ್ಲಿ ಎಂಎಸ್ಐಎಲ್ ಆಮದು ಮರಳು ಮಾರಾಟದ ಬುಕ್ಕಿಂಗ್ ಏಜೆಂಟ್‌ಗಾಗಿ ಅರ್ಜಿ ಎಂದು ಬರೆದು ಕವರ್ ಅನ್ನು ಪ್ರಧಾನ ವ್ಯವಸ್ಥಾಪಕರು (ಆಮದು ಮತ್ತು ರಫ್ತು) ರವರ ಹೆಸರಿಗೆ ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿರುತ್ತದೆ.

ಅಥವಾ

3 ಅರ್ಜಿ ನಮೂನೆಯ ಜೊತೆಯಲ್ಲಿ ದಾಖಲೆಗಳನ್ನು ಲಗತ್ತಿಸಿ ಸಂಸ್ಥೆಯ ಕೇಂದ್ರ ಕಛೇರಿ, ಬೆಂಗಳೂರು-560 052 ಇಲ್ಲಿ ಸ್ವಾಗತಕಾರರ ಸ್ಥಳದ ಬಳಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಕೊನೆಯ ದಿನಾಂಕಕ್ಕಿಂತ ಮುಂಚಿತವಾಗಿ ಹಾಕಬಹುದಾಗಿರುತ್ತದೆ.

4. ನಿಗದಿತ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## ಆಮದು ಮತ್ತು ರಫ್ತು ವಿಭಾಗ

**#36, ಎಂಎಸ್‌ಐಎಲ್ ಹೌಸ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052**

EOI ಅಧಿಸೂಚನೆ ಸಂಖ್ಯೆ: ಎಂಎಸ್‌ಐಎಲ್/ಎಕ್ಸಿಂ/53/2017-18 ದಿನಾಂಕ 01-03-2018

ಆಮದು ಮಾಡಿಕೊಂಡ ಎಂಎಸ್‌ಐಎಲ್ ಮರಳಿನ ಮಾರಾಟಕ್ಕಾಗಿ "ಬುಕ್ಕಿಂಗ್ ಏಜೆಂಟ್ಸ್" ಎಂಪ್ಯಾನೆಲ್ ಮೆಂಟ್‌ಗಾಗಿ ಅರ್ಜಿ ನಮೂನೆ.

| ಕ್ರ.ಸಂ | ವಿವರವಾದ ಮಾಹಿತಿ | ಪ್ರತಿಕ್ರಿಯೆ |
|---|---|---|
| 1 | ವೈಯುಕ್ತಿಕ ಸಂಸ್ಥೆ/ಏಜೆನ್ಸಿಯ ಹೆಸರು. | |
| 2 | ಕಛೇರಿ/ವಸತಿ ವಿಳಾಸ ಮತ್ತು ಸಂಪರ್ಕ ವ್ಯಕ್ತಿಯ ಹೆಸರು. | |
| 3 | ಮೊಬೈಲ್ ಸಂಖ್ಯೆ/ಇ-ಮೇಲ್ ಇತ್ಯಾದಿ. | |
| 4 | ಬುಕ್ಕಿಂಗ್ ಏಜೆಂಟ್ಸ್ ವಿದ್ಯಾರ್ಹತೆ | |
| 5 | ಅನುಭವ: ಪ್ರಸ್ತುತ ವ್ಯವಹಾರದ ಸ್ವರೂಪ ಮತ್ತು ವಹಿವಾಟಿನ ಪರಿಮಾಣವನ್ನು ಸೂಚಿಸುವುದು. | |
| 6 | ಸಂಬಂಧಿಸಿದ ಮಾಹಿತಿ ಒದಗಿಸುವುದು.<br>* ತಿದ್ದುಪಡಿ<br>(ಜಿಎಸ್‌ಟಿ ಇಲ್ಲದಿದ್ದಲ್ಲಿ ಒಂದು ತಿಂಗಳಿನೊಳಗಾಗಿ ಪಡೆದುಕೊಳ್ಳತಕ್ಕದ್ದು) | 1. ಪ್ಯಾನ್______________<br>2. ಜಿಎಸ್‌ಟಿ_____________<br>3. ಬ್ಯಾಂಕ್ ಖಾತೆ ಸಂಖ್ಯೆ_____<br>4. ಐಎಫ್‌ಎಸ್‌ಸಿ ಕೋಡ್ ಸಂಖ್ಯೆ_______<br>5. ಶಾಖೆಯ ವಿಳಾಸ_______________ |
| 7 | ನೀವು ಬುಕಿಂಗ್ ಏಜೆಂಟ್ ಆಗಿ ಕೆಲಸ ಮಾಡಲು ಬಯಸುತ್ತಿರುವ ಪ್ರದೇಶ. (ಇದು ಸೂಚನೆ ಮಾತ್ರ ಆಗಿದ್ದು ಕಂಪನಿಯ ನಿರ್ಣಾಯಕವಾಗಿರುವುದಿಲ್ಲ). | ಆದ್ಯತೆ 1:<br>ಆದ್ಯತೆ 2:<br>ಅಧ್ಯತೆ 3: |

| | | |
|---|---|---|
| 8 | ನಿಮ್ಮ ಕಡೆಯಿಂದ ಒಂದು ತಿಂಗಳಿಗೆ ಮಾರಾಟ ಮಾಡಬಹುದಾದ ಮರಳಿನ ನಿರೀಕ್ಷಿತ ಪ್ರಮಾಣ. | |
| 9 | ನೀವು ಕಟ್ಟಡ ನಿರ್ಮಾಣಗಾರರೇ/ಕಟ್ಟಡ ಸಾಮಗ್ರಿಗಳನ್ನು ಮಾರಾಟ ಮಾಡುವ ವರ್ತಕರೇ/ಸಿವಿಲ್ ಎಂಜಿನಿಯರಿಂಗ್ ಗುತ್ತಿಗೆದಾರರೇ/ವಿತರಕರೇ/ರವಾನೆಯ ಪ್ರತಿನಿಧಿಗಳೇ/ದೊಡ್ಡ ಪ್ರಮಾಣದ ದಾಸ್ತಾನುಗಾರರೇ/ ಸೂಪರ್ ಸ್ಟಾಕಿಟ್ಸ್‌ಗಳೇ/ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದ ಉತ್ಪನ್ನಗಳ ಸಾಗಾಣಿಕೆದಾರರೇ? ಇದ್ದಲ್ಲಿ ನಮೂದಿಸಿ. | |

**ಘೋಷಣೆ**

ನಾನು/ನಾವು ಒದಗಿಸಿದ ಎಲ್ಲಾ ಮಾಹಿತಿಗಳು ದೃಢೀಕರಿಸಿದ ದಾಖಲೆಗಳು ನಮ್ಮ ಜ್ಞಾನ ಮತ್ತು ತಿಳುವಳಿಕೆಯ ಪ್ರಕಾರ ನಂಬಿಕೆ ಹಾಗೂ ಅತ್ಯುತ್ತಮವಾಗಿದೆಯೆಂದು ನಂಬಿರುತ್ತೇವೆ. ಯಾವುದೇ ತಪ್ಪು ಮಾಹಿತಿ ಸುಳ್ಳು ದಾಖಲೆಗಳನ್ನು ಸಲ್ಲಿಸಿರುವ ಸಂದರ್ಭದಲ್ಲಿ ನನ್ನ/ನಮ್ಮ ಅರ್ಜಿಯನ್ನು ಎಂಎಸ್‌ಐಎಲ್ ವಿವೇಚನೆಯಿಂದ ತಿರಸ್ಕರಿಸಬಹುದು. ನಾನು/ನಾವು ಎಂಎಸ್‌ಐಎಲ್ ಪ್ರಕಟಿಸಿದ EOI ಅನ್ನು ಅರ್ಥಮಾಡಿಕೊಂಡಿರುತ್ತೇನೆ/ವೆ. ಎಂಎಸ್‌ಐಎಲ್ ನ ಕರಾರಿನ ಜವಾಬ್ದಾರಿಗಳಿಗೆ ಬದ್ಧನಾಗಿರುತ್ತೇನೆ. ಮೇಲೆ ತಿಳಿಸಿರುವಂತೆ "ಬುಕ್ಕಿಂಗ್ ಏಜೆಂಟ್" ಆಗಿ ಎಂಎಸ್‌ಐಎಲ್ ನಿಬಂಧನೆ ಮತ್ತು ನಿಯಮಗಳನ್ನು ನಾನು ಅನುಸರಿಸುತ್ತೇನೆ.

ಅಧಿಕಾರ ಹೊಂದಿರುವವರ ಸಹಿ:---------

ಹೆಸರು: ----------

ಯಾವುದೇ ವ್ಯೆಯಕ್ತಿಕ/ಏಜೆನ್ಸಿಯ/ಸಂಸ್ಥೆಯ
ಅಧಿಕೃತ ಮೊಹರು (ಸೀಲ್)

ದಿನಾಂಕ:-------

ಸ್ಥಳ:----------

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಆಮದು ಮತ್ತು ರಫ್ತು ವಿಭಾಗ
**#36, ಎಂಎಸ್‌ಐಎಲ್ ಹೌಸ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052**

EOI ಅಧಿಸೂಚನೆ ಸಂಖ್ಯೆ: ಎಂಎಸ್‌ಐಎಲ್/ಎಕ್ಸಿಂ/53/2017-18 ದಿನಾಂಕ 01-03-2018

**ಎಂಎಸ್‌ಐಎಲ್ ಆಮದು ಮರಳು ಮಾರಾಟ ಬುಕ್ಕಿಂಗ್ ಏಜೆಂಟ್ ದಾಖಲಿಸಲು ಷರತ್ತು ಮತ್ತು ನಿಬಂಧನೆಗಳು:**

1. ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರಾಟ, ಮರಳು ಮಾರಾಟ, ಇತರೆ ಮಾರಾಟಗಳ ಸಾಮಗ್ರಿಗಳ ವ್ಯವಹಾರದ ಅನುಭವ ಹೊಂದಿದ್ದವರಿಗೆ ಆದ್ಯತೆ ನೀಡಲಾಗುವುದು.
2. ಬಿಲ್ಡರ್/ ನಿರ್ಮಾಣ ಸಂಸ್ಥೆಗಳು/ರಿಯಲ್ ಎಸ್ಟೇಟ್ ಏಜೆನ್ಸಿಗಳು/ವೈಯುಕ್ತಿಕ ಗುಂಪು ಬೃಹತ್ ಮರಳಿನ ಗ್ರಾಹಕರೊಂದಿಗೆ ವ್ಯವಹರಿಸಿದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
3. ಪಾಲ್ಗೊಳ್ಳುವವರು ಮರುಪಾವತಿಸಬಹುದಾದ ಬಡ್ಡಿರಹಿತ ಮೊತ್ತ ರೂ.*1 ಲಕ್ಷ (ರೂ. ಒಂದು ಲಕ್ಷ ಮಾತ್ರ) ಎಂಎಸ್‌ಐಎಲ್ ಸಂಸ್ಥೆಗೆ ಭದ್ರತಾ ಠೇವಣಿಯಾಗಿ ಖಾತರಿಯ ಹೊಣೆಗಾರಿಕೆಯಾಗಿ ನೀಡಬೇಕಾಗಿರುತ್ತದೆ. (ಈ ಬಗ್ಗೆ ಮುಂದೆ ತಿಳಿಸಲಾಗುವುದು. ಅರ್ಜಿಯೊಂದಿಗೆ ಈ ಮೊತ್ತ ತುಂಬುವ ಅವಶ್ಯಕತೆ ಇಲ್ಲ)
4. ಭಾಗವಹಿಸುವವರು ಜಿಎಸ್‌ಟಿ/ಪ್ಯಾನ್ ಸಂಖ್ಯೆ ಸಲ್ಲಿಸಬೇಕಾಗಿರುತ್ತದೆ. (*ಜಿಎಸ್‌ಟಿ ಸಂಖ್ಯೆಯು ಇಲ್ಲದಿದ್ದಲ್ಲಿ ಅದನ್ನು ಒಂದು ತಿಂಗಳಿನೊಳಗಾಗಿ ಒದಗಿಸುವುದು)
5. ಭಾಗವಹಿಸುವವರು ತಮ್ಮ ಕಾರ್ಯಾಚರಣೆಯ ಪ್ರದೇಶದಲ್ಲಿ ಎಂಎಸ್‌ಐಎಲ್ ಆಮದು ಮಾಡಿಕೊಂಡ ನೈಸರ್ಗಿಕ ನದಿ ಮರಳನ್ನು ಮಾರಾಟ ಮಾಡಲು ಪ್ರತಿ ತಿಂಗಳು ಮಾರಾಟ ಮಾಡುವ ವ್ಯವಹಾರದ ಪ್ರಸ್ತಾಪವನ್ನು ಸಲ್ಲಿಸಬೇಕು.
6. ಭಾಗವಹಿಸುವವರು ಮರಳಿನ ಗುಣಮಟ್ಟದ ಮೂಲಭೂತ ಜ್ಞಾನವನ್ನು ಹೊಂದಿರಬೇಕು ಆದೇಶದ ಬೆಲೆಯ ಅಂಶ, ಸಾರಿಗೆ ವ್ಯವಸ್ಥೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿಯಮಗಳು ಮತ್ತು ಕರ್ನಾಟಕದಲ್ಲಿ ಮರಳಿನ ಮಾರಾಟಕ್ಕೆ ಸಂಬಂಧಿಸಿದಂತೆ ಇತರೆ ವಿಷಯಗಳ ಬಗ್ಗೆ ತಿಳಿದಿರಬೇಕು.
7. ನೈಸರ್ಗಿಕ ನದಿ ಮರಳಿಗೆ ಅಧಿಕೃತ ಎಂಎಸ್‌ಐಎಲ್ ಸಿ&ಎಫ್ ಏಜೆಂಟ್/ಡೀಲರ್ ಮೂಲಕ ಬೇಡಿಕೆ ಸಲ್ಲಿಸಿ ಯಶಸ್ವಿಯಾಗಿ ಕಾರ್ಯಗತಗೊಳಿಸಲು ಬುಕ್ಕಿಂಗ್ ಏಜೆಂಟ್ ವ್ಯಾಪಾರದಲ್ಲಿ ಬಲವಾದ ಚರ್ಚೆ ಮತ್ತು ಮಾರಾಟ ಕೌಶಲ್ಯವನ್ನು ಹೊಂದಿರಬೇಕು.
8. ಪ್ರಾಯೋಗಿಕವಾಗಿ ಬುಕ್ಕಿಂಗ್ ಏಜೆಂಟ್ಸ್ ಅನ್ನು **ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಮತ್ತು ಮಂಡ್ಯ** ಜಿಲ್ಲೆಗಳಲ್ಲಿ ಮಾತ್ರ ಪ್ರಾಥಮಿಕ ಹಂತದಲ್ಲಿ ಕೇಂದ್ರೀಕರಿಸುವುದು, ಸ್ಟಾಕ್ ಯಾರ್ಡ್ ಸ್ಥಾಪನೆಯ ವಿಸ್ತರಣೆಯ ನಂತರ ಕರ್ನಾಟಕದ ಇತರ ಭಾಗಗಳನ್ನು ಹೊಂದಿಸಿಕೊಳ್ಳಲಾಗುತ್ತದೆ.
9. ಎಂಎಸ್‌ಐಎಲ್ ತನ್ನ ವಿವೇಚನೆಯಿಂದ ಯಾವುದೇ ಪ್ರಸ್ತಾಪವನ್ನು ತಿರಸ್ಕರಿಸುವ, ಅಧಿಕಾರವನ್ನು ಹೊಂದಿದೆ.
10. ಎಂಎಸ್‌ಐಎಲ್ ಯಾವುದೇ ಕಾರಣವನ್ನು ನೀಡದೆ ಎಲ್ಲಾ ಪ್ರಸ್ತಾಪಗಳನ್ನು ತಿರಸ್ಕರಿಸುವ ಅಥವಾ ಹಕ್ಕುಗಳನ್ನು ಕಾಯ್ದಿರಿಸುವ ಹೊಸ EOI ಗಾಗಿ ಕರೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.